ಮೂರೊತ್ತೂ ಬಾಟಲಿ ಹಿಡಕೊಂಡು ನೀರು ಕೊಡಿ ನೀರು ಕೊಡಿ ಅಂತ ಬರೋನು. ನೀರು ಕೊಡ್ತಾ ಕೊಡ್ತಾ ಇವಳೇ ನೀರಾಗಿ ಹರಿದು ಬಿಟ್ಟಳು" ಎಂದು ಅಮ್ಮ ಔಡುಗಚ್ಚಿದಳು. ನಾನು ಮೊದಲ ಬಾರಿಗೆ ಬೆಚ್ಚಿಬಿದ್ದಿದ್ದೆ. ಬದುಕು ಇಷ್ಟು ಕ್ರೂರವಾಗಿರಬಹುದೆಂದು ಯಾವತ್ತು ಯೋಚಿಸಿರಲಿಲ್ಲ.

ಅಮೃತಮತಿಯರು ಯಾಕೆ ನಿರ್ಮಾಣವಾಗುತ್ತಾರೆಂದರೆ... ನನಗದು ಈವತ್ತಿಗೂ ಗೊತ್ತಿಲ್ಲ. ಅದೆಲ್ಲ ಸಾಯಲಿ, ಆ ದಿನ ಪಾಪು ನನ್ನ ಬಳಿಯೇ ಇದ್ದಳು. ನನ್ನ ಬದುಕಿನ ಗಮ್ಯ ನನ್ನ ಮಗಳೇ ಎಂದು ನಿಶ್ಚಯಿಸಿಕೊಂಡು ಹರಿದು ಹರಡಿಹೋಗುತ್ತಿದ್ದ ತಲ್ಲಣದ ತುಣುಕುಗಳನ್ನು ಗಾಳಿಗೆ ತೂರಿಬಿಟ್ಟು ಸಮಾಜದೆದುರು ದಿಟ್ಟವಾಗಿ ನಿಂತು ಮಗಳನ್ನು ಬೆಳೆಸುವ ಆಸೆ ಕನಸುಗಳೊಂದಿಗೆ ನಾನಿದ್ದೆ. ನಿರಾಳವಾಗಿದ್ದೆ. ನಿರಾಳ ಅಲ್ಪಾಯುವೆಂದು ತಿಳಿದಿದ್ದು ಆ ದಿನ...

ಅದೇ ಇಲ್ಲದೆ ಅದರ ಹೆಸರಿಟ್ಟುಕೊಂಡವಳು ನನ್ನನ್ನು ಧಿಕ್ಕರಿಸಿ ಒಂದು ಮಾತೂ ಹೇಳದೆ ಕೇಳದೆ ಓಡಿ ಹೋಗಿ ಮೂರು ತಿಂಗಳಾಗಿದ್ದಿರಬಹುದು.

ಕಾನ್ವೆಂಟ್‌ನಿಂದ ಪಾಪುವನ್ನು ಕರೆತರುವ ಆಟೋ ಖಾಲಿಯಾಗಿ ಬಂದಿತ್ತು. ಅಮ್ಮ ಹೌಹಾರಿ ಬಿಟ್ಟಿದ್ದಳು. ನಾನು ಹುಡುಕದ ಜಾಗವಿಲ್ಲ. ಪೊಲೀಸ್ ಕಂಪ್ಲೇಂಟ್ ಕೊಟ್ಟು ಮನೆಗೆ ಬಂದು ಹತಾಶವಾಗಿ ಕೈಚೆಲ್ಲಿ ಕುಳಿತಾಗ... ರಿಂಗಣಿಸಿತು ಲ್ಯಾಂಡ್‌ಲೈನು. ಅತ್ತಕಡೆ ಅವಳ ಧ್ವನಿ... "ಪಾಪೂನ ಹುಡುಕಬೇಡಿ. ಅವಳನ್ನು ಬಿಟ್ಟಿರೋಕ್ಕೆ ನಂಗಾಗಲ್ಲ. ಅವಳನ್ನು ನಿಮಗೇ ಬಿಟ್ಟು ಕೊಡಬೇಕಂತ ಇದ್ದೆ. ಆದ್ರೆ... ಯಾಕೋ ನಂಗಾಗಲಿಲ್ಲ. ಪ್ಲೀಸ್ ನನ್ನ ಕ್ಷಮಿಸಿಬಿಡಿ. ಪಾಪೂನ ಚೆನ್ನಾಗಿ ನೋಡ್ಕೋತೀನಿ." ಇಲ್ಲ, ನನ್ನಿಂದ ಸಹಿಸಲಾಗಿರಲಿಲ್ಲ. ನನ್ನ ನಿಘಂಟಿನಲ್ಲಿದ್ದ ಎಲ್ಲಾ ಕೆಟ್ಟ ಬೈಗುಳಗಳನ್ನು ಅವಳ ಮೇಲೆ ಫೋನಿನಲ್ಲೇ ಪ್ರಯೋಗಿಸಿದೆ. ಅವಳು ಫೋನಿಟ್ಟು ಎಷ್ಟೋ ಹೊತ್ತಾದ ಮೇಲೂ ಬೈಯುತ್ತಿದ್ದೆ ಎಂದು ಆಮೇಲೆ ಗೊತ್ತಾಯಿತು. ಕ್ರಮೇಣ ಒಂದು ನಿರಾಸಕ್ತಿ ಆವರಿಸಿಕೊಂಡಿತು. ಅವಳನ್ನಾಗಲೀ ಪಾಪುವನ್ನಾಗಲೀ ಹುಡುಕಲೂ ಆಗದಂಥ ಖಿನ್ನತೆ ಆವರಿಸಿಕೊಂಡಿತ್ತು. ಆದರೆ... ಅಮ್ಮ ನನಗಿಂಥ ಹೆಚ್ಚು ನವೆಯತೊಡಗಿದ್ದಳು. ಅದೇ ಕೊರಗಿನಲ್ಲಿ ಮನೋ ರೋಗಿಯಾದಳು. ಯಾರೇ ನೀರು ಕೇಳಿದರೂ,

"ನೀರು ಕೊಡಬೇಡ ಶಂಕ್ರೂ. ಮುಂಡೆಮಕ್ಳು ನೀರು ಮಾತ್ರ ತಗೊಂಡೋಗಲ್ಲ" ಎಂದು ಕಿರುಚಾಡುತ್ತಾ ಆಡುತ್ತಾ, ಸವೆದು ಹೋಗುತ್ತಾ ಅದೇ ಗುಂಗಿನಲ್ಲಿ ಸತ್ತೇ ಹೋದಳು. ಸತ್ತ ಕೆಲದಿನಗಳಲ್ಲಿ ಫೋನ್ ಮಾಡಿದ್ದಳು, "ಒಂದು ಮಾತು ನಂಗೆ ಹೇಳ್ಬಾರದಿತ್ತ? ಅವ್ರ ಕಡೇ ದರ್ಶನನಾದ್ರೂ ತಗೋಳಕ್ಕೆ ಬರ್ತಿದ್ದೆ. ಅಂಥ ಅಮ್ಮ! ನನ್ನಮ್ಮ ಇಪ್ಪತ್ತು ವರ್ಷ ಸಾಕಿರಬಹುದು, ಈ ಅಮ್ಮ ಹತ್ತು ವರ್ಷ ಸಾಕಿದ್ದಾರೆ. ಹಂಗಂತ ಪ್ರೀತಿ ಕಮ್ಮಿ ಆಗತ್ತಾ..." ಅತ್ತಿದ್ದಳು. "ಪ್ರೀತಿ ಪ್ರೇಮ ಬಾಂಧವ್ಯಗಳ ಸುದ್ದಿ ನಿಂಗ್ಯಾಕೆ? ಫೋನ್ ಇಡು" ಎಂದು ಕಟಕಿದಾಗ ಮೌನವಾಗಿದ್ದಳು.

ಅವಳೆಲ್ಲಿದ್ದಾಳೆಂದು ನಾನೂ ಕೇಳಿರಲಿಲ್ಲ. ಅವಳೂ ಹೇಳಿರಲಿಲ್ಲ. ಹನ್ನೆರಡು ವರ್ಷಗಳನ್ನು ಒಂದು ಯುಗದಂತೆ ಕಳೆದಿದ್ದೆ. ಇದ್ದಕ್ಕಿದ್ದಂತೆ ಒಂದುದಿನ ಅವನು ಬಂದಿದ್ದ. ಮೊದಲಿಗೆ ಗುರುತಾಗಲಿಲ್ಲ.

"ಸಾರ್... ನೀವು ದೇವರಂತವರು, ನಿಮ್ಮ ಮುಂದೆ ನಿಲ್ಲುವ ಯೋಗ್ಯತೇನೂ ನನಗಿಲ್ಲ. ಬೇರೊಬ್ಬರಾಗಿದ್ರೆ ನಾನೀ ದಿನ ಈ ಭೂಮಿ ಮೇಲೆ ನಿಲ್ಲುವಂತೆಯೇ ಇರಲಿಲ್ಲ. ನೀವು... ಪಾಪದವರು ಬಾಳಗೊಟ್ಟಿದ್ದೀರಿ" ಎಂದ. ಅವನ್ಯಾರೆಂದು ಇನ್ಯಾವ ವಿವರಣೆಯೂ ಬೇಕಿರಲಿಲ್ಲ.

"ಸರಿ ಈಗ್ಯಾಕೆ ಇಲ್ಲಿ ಬಂದೆ?" ಎಂದೆ. "ಏನಿಲ್ಲ ಸಾರ್, ಈಗ ನಿಮ್ಮ ಮಗಳ ಮದುವೆ... ಅವಳು ನನಗೂ ಮಗಳಿದ್ದ ಹಾಗೆ, ಒಳ್ಳೆ ಕಡೆ ಸಂಬಂಧ ನೋಡಿ ಮದ್ವೆ ಮಾಡ್ತಿದ್ದೀನಿ" ಎಂದ.

"ಅದಕ್ಕೆ?" ಎಂದೆ ಚುಟುಕಾಗಿ.